# ಇದು 'ಬರಿ' ಇಂಕು ಪೆನ್ನಲ್ಲ!

**ಚಂದ್ರಕಾಂತ ವಡ್ಡು**
ಕಲೆ: ಪ್ರವೀಣ್ ಆಚಾರ್ಯ



ನನ್ನ ತಾಯಿಯ ತವರೂರು ಕರಜಗಿಯಲ್ಲಿ ಪುರಾಣಿಕ ಅಂತ ನಮ್ಮ ಕುಟುಂಬ ವೈದ್ಯರಿದ್ದರು. ಆ ದೊಡ್ಡ ಹಳ್ಳಿಯ ಪುಟ್ಟ ಪೇಟೆಯಲ್ಲಿ ಅವರ ಕ್ಲಿನಿಕ್ ಇತ್ತು. ಆಗ ವೈದ್ಯರಿಗಿಂತ ಕಾಂಪೌಂಡರಗೇ ಹೆಚ್ಚು ಕೆಲಸ. ಅಳುವ ಮಕ್ಕಳನ್ನು ಸಂಭಾಳಿಸುವುದು, ಆತಂಕಗೊಂಡ ತಾಯಂದಿರನ್ನು ಸಮಾಧಾನಿಸುವುದು, ದೊಡ್ಡ ದೊಡ್ಡ ಗಾಜಿನ ಸೀಸೆಗಳಲ್ಲಿ ತುಂಬಿಸಿಟ್ಟ ಬಣ್ಣಬಣ್ಣದ ಔಷಧಿಗಳನ್ನು ವೈದ್ಯರ ಕಣ್ಸೂಚನೆ ಅನುಸರಿಸಿ ವಿವಿಧ ರೋಗಗಳಿಗೆ ತಕ್ಕುದಾದ, ತಕ್ಕಷ್ಟು ಪ್ರಮಾಣದಲ್ಲಿ ರೋಗಿಗಳೇ ಹಿಡಿದುಕೊಂಡು ಬಂದ ಪುಟ್ಟ ಬಾಟಲಿಗಳಲ್ಲಿ ತುಂಬಿಸಿಕೊಡುವುದು, ಅದನ್ನು ತೆಗೆದುಕೊಳ್ಳುವ ಹೊತ್ತು–ಪ್ರಮಾಣ ಸೂಚಿಸುವುದು ಸೇರಿ ಅನೇಕ ಕೆಲಸಗಳನ್ನು ಕಾಂಪೌಂಡರು ನಿಭಾಯಿಸುತ್ತಿದ್ದರು.

ಆ ಕಾಂಪೌಂಡರು ಸ್ಟೋವ್ ಮೇಲೆ ತಳಮಳಿಸುವ ನೀರಿನ ಪಾತ್ರೆಯಲ್ಲಿ ಕುದಿಯುತ್ತಿದ್ದ ಡಬ್ಬಣದಳತೆಯ ಸೂಜಿಯನ್ನು ಉದ್ದನೆಯ ಚಿಮುಟಿಗೆಯಿಂದ ಮೇಲೆತ್ತಿ ವೈದ್ಯರಿಗೆ ಕೊಡುವುದು, ಅವರು ತಮ್ಮ ಬಳಿ ಇರಿಸಿಕೊಂಡಿರುತ್ತಿದ್ದ ಸಿರಿಂಜಿನ ತಲೆಗೆ ಈ ಮರುಬಳಕೆ ಸೂಜಿಯನ್ನು ಕಿರೀಟದಂತೆ ತೊಡಿಸಿ ಮಂಚದ ಮೇಲೆ ಡಬ್ಬು ಮಲಗಿಸಿದ ರೋಗಿಯ ಚಪ್ಪೆಗೆ ಚುಚ್ಚುವುದು ನಮ್ಮಂತಹ ಮಕ್ಕಳಿಗೆ ಬೆಚ್ಚಿಬೀಳಿಸುವ ದೃಶ್ಯ. ಅನೇಕಬಾರಿ ಒಂದೇ ವಾರದಲ್ಲಿ ರೋಗ ವಾಸಿಯಾದರೂ ಇಂಜೆಕ್ಷನ್ ಮಾಡಿದ ಜಾಗದ ನೋವು ಶಮನವಾಗಲು ಹಲವು ವಾರಗಳು ಹಿಡಿಯುತ್ತಿದ್ದವು. ಬಾವು ಬಂದು ನೋವು ನೀಡುತ್ತಿದ್ದ ಆ ಭಾಗಕ್ಕೆ ಮನೆಯಲ್ಲಿ ಕಾವು ಕೊಡುವುದು ಚಿಕಿತ್ಸೆಯ ಮತ್ತೊಂದು ಮಜಲು.

ಹಾಗಾಗಿ, ವೈದ್ಯರು ನಾಲಗೆ–ನಾಡಿ–ಕಣ್ಣು ಪರೀಕ್ಷಿಸುವ ಮುಂಚೆಯೇ ಕೆಲವು ಭಯಸ್ಥ, ಅನುಭವೀ ರೋಗಿಗಳು 'ಸೂಜಿ ಬೇಡ, ಗುಳಿಗಿ ಕೊಡ್ರಿ ಡಾಕ್ಟ್ರೇ' ಎಂದು ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕುತ್ತಿದ್ದರು. ಹೀಗೆ ಹೇಳುವುದರ ಹಿಂದೆ ಇಂಜೆಕ್ಷನೋತ್ತರ ಸಂಕಟದ ಜೊತೆಗೆ ವೈದ್ಯರು ಇಂಜೆಕ್ಷನ್‌ಗೆ ವಿಧಿಸುತ್ತಿದ್ದ ಹೆಚ್ಚುವರಿ ಶುಲ್ಕ ಉಳಿಸುವ ಬಡರೋಗಿಗಳ ಮುನ್ನೆಚ್ಚರಿಕೆ ಇರುತ್ತಿತ್ತು. ಹಳ್ಳಿಜನರ ಸಕಲ ಆರ್ಥಿಕ, ಸಾಮಾಜಿಕ, ಸಾಂಸಾರಿಕ ಇತಿಮಿತಿ ಬಲ್ಲ ವೈದ್ಯರಿಗೆ ಈ ಸೂಕ್ಷ್ಮ ಅರಿವಿಗೆ ನಿಲುಕದ ವಿಷಯವೇನಲ್ಲ. ಅನಿವಾರ್ಯ ಪ್ರಸಂಗಗಳಲ್ಲಿ ವೈದ್ಯರೇ, 'ಇದು ಗುಳಿಗೆಗೆ ಬಗ್ಗುವ ಕಾಯಿಲೆಯಲ್ಲ, ಸೂಜಿ ಚುಚ್ಚುತ್ತೇನೆ' ಎಂದು ಘೋಷಿಸಿದಾಗ ರೋಗಿ ತನ್ನ ಜಾಮೀನು ಮನವಿ ಹಿಂಪಡೆದು ಶಿಕ್ಷೆಗೆ ಸಿದ್ಧವಾಗಲೇಬೇಕು. ಕೆಲವೊಮ್ಮೆ ವೈದ್ಯರು, 'ಗುಳಿಗೆಯೇ ಸಾಕು' ಎಂದು ತೀರ್ಪಿತ್ತರೂ ರೋಗಿ, "ಮುಂದಿನ ವಾರ ಮಗಳ ಮದುವೆ ಇದೆ ಡಾಕ್ಟರೇ, ಒಂದು ಇಂಜೆಕ್ಷನ್ ಮಾಡಿಬಿಡಿ" ಎಂದು ಮರುಪರಿಶೀಲನಾ ಅರ್ಜಿ ಸಲ್ಲಿಸುವುದುಂಟು.

ಆದರೆ, ಇಷ್ಟೆಲ್ಲಾ ರಂಪಾಟವಿರುವ ದವಾಖಾನೆಗೆ ಹೋಗಲು ಆಗ ಪ್ರಾಥಮಿಕಶಾಲಾ